ಸೇರುವಂತೆ), ಶರೀರಕ್ಕೆ ಕಾರಣವಾದ ಹದಿನೈದು ಕಲೆಗಳೂ ತಮ್ಮ ತಮ್ಮ ಕಾರಣವನ್ನು ಸೇರುತ್ತವೆ. ಜೀವಾತ್ಮನು ಕೂಡ ಅವ್ಯಯವಾದ ಬ್ರಹ್ಮನಲ್ಲಿ ಒಂದಾಗುತ್ತಾನೆ. **ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಃ** – ನಿಶ್ಚಿತವಾದ ಜ್ಞಾನ ಮತ್ತು ಆತ್ಮನಿಷ್ಠೆಯನ್ನು ಹೊಂದಿದ ಜ್ಞಾನಿಗಳು ಬದುಕಿರುವಾಗಲೇ ಬ್ರಹ್ಮಜ್ಞಾನವನ್ನು ಪಡೆದು, ದೇಹಪರಿತ್ಯಾಗದ ನಂತರವೂ ಬ್ರಹ್ಮನಲ್ಲಿಯೇ ಐಕ್ಯರಾಗಿ ಬಿಡುತ್ತಾರೆ. ಉಪನಿಷತ್ತಿನ ಕೊನೆಯ ಭಾಗದಲ್ಲಿ ಮತ್ತೊಂದು ಸುಪರಿಚಿತವಾದ ದೃಷ್ಟಾಂತ ಬರುತ್ತದೆ. ಹೇಗೆ ಹರಿಯುತ್ತಿರುವ ನದಿಗಳು ತಮ್ಮ ನಾಮರೂಪಗಳನ್ನು ಕಳೆದುಕೊಂಡು, ಸಮುದ್ರದಲ್ಲಿ ಒಂದಾಗುತ್ತವೆಯೋ, ಹಾಗೆಯೇ ಜ್ಞಾನಿಯೂ ಕೂಡ, ಅವಿದ್ಯಾಕೃತವಾದ ನಾಮರೂಪಗಳನ್ನು ತ್ಯಾಗಮಾಡಿ, ಆ ಪರಾತ್ಪರ ಪುರುಷನನ್ನು ಹೊಂದುತ್ತಾನೆ.

ಬ್ರಹ್ಮವನ್ನು ಅರಿತುಕೊಂಡವನು ಬ್ರಹ್ಮವೇ ಆಗಿಬಿಡುತ್ತಾನೆ ಎಂಬುದು ಈ ಉಪನಿಷತ್ತಿನ ಸಂದೇಶ. ಇಂಥ ಬ್ರಹ್ಮವಿದ್ಯೆಯನ್ನು ಶ್ರೋತ್ರಿಯರೂ, ಬ್ರಹ್ಮನಿಷ್ಠರೂ, ಶ್ರದ್ಧಾವಂತರೂ ಆಗಿರುವವರಿಗೆ ಉಪದೇಶಿಸಬೇಕು ಎಂಬ ನಿದರ್ಶನವೂ ಇದೆ. ಕೊನೆಯ ಮಂತ್ರದಲ್ಲಿ, "ಈ ಸತ್ಯವನ್ನು ಅಂಗಿರಸನು ಶೌನಕನಿಗೆ ಹೇಳಿದನು" ಎಂದು ಮತ್ತೆ ಹೇಳಿದೆ. ಎಲ್ಲ ಆಚಾರ್ಯರೂ, ಮೋಕ್ಷವನ್ನು ಬಯಸಿ ತಮ್ಮ ಬಳಿಗೆ ಬರುವ ಶಿಷ್ಯರಿಗೆ ಹೀಗೆಯೇ ಉಪದೇಶಿಸಬೇಕು ಎಂಬುದು ಇಲ್ಲಿ ಸೂಚಿಸಲ್ಪಟ್ಟಿದೆ. ಕಡೆಯಲ್ಲಿ **ನಮಃ ಪರಮ ಋಷಿಭ್ಯಃ** ಎಂದು ಎರಡು ಸಲ ಹೇಳಿರುವುದು, ಅತ್ಯಂತ ಆದರವನ್ನು ಸೂಚಿಸುವುದಕ್ಕೆ ಮತ್ತು ಮುಂಡಕೋಪನಿಷತ್ತಿನ ಸಮಾಪ್ತಿಯನ್ನು ತೋರಿಸುವುದಕ್ಕೆ.

---

(ಪುಟ 31ರಿಂದ)

## ಮೂರನೇ ಕಿವಿ

ನಿರಂಜನನ ಸಮಸ್ಯೆಯು ವೈದ್ಯಕೀಯವಾಗಿ ನಿರ್ಣಯವಾದ ಒಂದು ದೀಪಾವಳಿ ದಿನ ಹೇಗೆ ತಮ್ಮ ಪಾಲಿಗೆ ಮಾತ್ರ ಒಂದು 'ಮಹಾ ಅಮಾವಾಸ್ಯೆ' ಯಾಯಿತು ಎಂಬ ನೋವನ್ನು ಲೇಖಕರು ಒಂದು ಅಧ್ಯಾಯದಲ್ಲಿ ತೋಡಿಕೊಂಡಿದ್ದಾರೆ. ಆದರೆ, ಉಕ್ತಿಶಕ್ತಿಯ ಕೊಡುಗೆಯನ್ನು ನೀಡುವುದರ ಮೂಲಕ ತನ್ನ ಮಗನ ಬಾಳಿಗೆ ದೀಪಾ ಒಂದು ದೀಪಾವಳಿಯನ್ನೇ ಹಾಯಿಸಿದರೆಂಬುದೂ, ಮತ್ತು ಮಗನ ಪಾಲಿಗೆ ಅವರು ಹೇಗೆ 'ಮಾತೃ'ವಷ್ಟೇ ಅಲ್ಲದೆ, 'ಮಾತೃಭಾಷಾಸರಸ್ವತಿ'ಯೇ ಆಗಿ ಬೆಳಗಿದರೆಂಬುದೂ ಓದುಗರಲ್ಲಿ ಆಶ್ಚರ್ಯಾನಂದಗಳನ್ನು ಉಂಟುಮಾಡುತ್ತವೆ. ಅಷ್ಟೇ ಅಲ್ಲ, ಸಾಧಾರಣ ಗೃಹಿಣಿಯಾಗಿದ್ದೂ ಏನೆಲ್ಲ ಸಾಧ್ಯವಾಗಿಸಬಹುದು ಎಂಬುದನ್ನು ಅವರು ತೋರಿಕೊಟ್ಟಿರುವುದು, "ಯಾಕೆ ಮೂಕನಾದ್ಯೋ, ಮಗನೇ ನೀ?" ಎಂದು ಅಸಹಾಯಕರಾಗಿ ಅಳುತ್ತಿರುವ ಅಸಂಖ್ಯಾತ ಖಿನ್ನ ಗೃಹಿಣಿಯರಿಗೆ ಹೊಸ ಹಾರೈಕೆ, ಹುರುಪು, ಹುಷಾರಿಗಳನ್ನು ನೀಡಿ ಮೇಲೆಬ್ಬಿಸುತ್ತದೆ.

'ರೋಟರಿ ವೆಸ್ಟ್ ಇನ್‌ಸ್ಟಿಟ್ಯೂಟ್ ಫಾರ್ ಮದರ್ ಆ್ಯಂಡ್ ಡೆಫ್ ಚೈಲ್ಡ್' ಎಂಬ ಈ ಹಿಂದೆ ಹೇಳಿದ ಮೈಸೂರಿನ ವಿಶೇಷ ಶಾಲೆಯು (ಫೋನ್: ೦೮೨೧–೨೫೪೪೫೩೨), ಶ್ರವಣಶಕ್ತಿ ಹೀನರಿಗೆ ಕಿವಿಬಾಯಿಗಳ ಮತ್ತು ತಾಯಂದಿರ ಮೂಲಕವೇ, ಮಾಂಟಸರಿ ಮಾದರಿಯಲ್ಲಿ ತರಬೇತಿ ನೀಡುವ ಅಪೂರ್ವ ಶಾಲಾಪೂರ್ವ ಶಿಕ್ಷಣಕೇಂದ್ರವಾಗಿದ್ದು (ಎಲ್ಲ ಸಂಸ್ಥೆಗಳಲ್ಲೂ ಸಾಮಾನ್ಯವಾಗಿ ಸಂಜ್ಞಾಭಾಷೆಯೇ ಮಾಧ್ಯಮವಾಗಿರುತ್ತದೆ), ಅದರ ಬಗ್ಗೆ ಮತ್ತು ಅದನ್ನು ಸ್ಥಾಪಿಸಿದ ರತ್ನಾ ಮತ್ತು ವಿಂಗ್ ಕಮ್ಯಾಂಡರ್ ಕೆ.ಕೆ. ಶ್ರೀನಿವಾಸನ್ ದಂಪತಿಯ ಬಗ್ಗೆ, ಹಾಗೂ ಅವರು ನೀಡಿದ ವಿಶಿಷ್ಟ ಚಿಕಿತ್ಸಕ ಭಾಷಾಶಿಕ್ಷಣದ ದೆಸೆಯಿಂದಾಗಿ, ಹುಟ್ಟಿನಿಂದಲೇ ಕಿವಿಕೇಳದವನಾಗಿದ್ದ ಅವರ ಮಗ ಡಾ. ರಾಜ ಎಸ್. ಕುಶಾಲ್‌ನಗರ್, ಇಂದು ಐದು ಡಿಗ್ರಿಗಳನ್ನು ಪಡೆದು, ಅಮೇರಿಕದಲ್ಲಿ 'ಕಾನೂನು' ಮತ್ತು 'ಕಂಪ್ಯೂಟರ್ ತಂತ್ರಜ್ಞಾನ' ಎಂಬ ಎರಡು ವಿಭಿನ್ನ ವಿಷಯಗಳಲ್ಲಿ ವಿಶೇಷಜ್ಞನಾಗಿ ಬೆಳಗಲು ಸಾಧ್ಯವಾಗಿದೆ ಎಂಬ ಬಗ್ಗೆ ಈ ಪುಸ್ತಕದಲ್ಲಿ ಒಂದು ರೋಚಕ ಅಧ್ಯಾಯವಿದೆ. ಇದೂ, ಮತ್ತು ನಕಲಿ ವೈದ್ಯರ ಬಗ್ಗೆ ಎಚ್ಚರಿಸುವುದಕ್ಕಾಗಿ ಹಾಗೂ ಕಿವುಡು ಮಕ್ಕಳ ಪೋಷಕರ ಕಿವಿಮಾತಿಗಾಗಿ ಕೊಟ್ಟಿರುವ ಅಧ್ಯಾಯಗಳೂ, ಪುಸ್ತಕದ ಮೌಲ್ಯವನ್ನು ಬಹುವಾಗಿ ಹೆಚ್ಚಿಸಿವೆ. ಪುಸ್ತಕದಲ್ಲಿನ ವಿಷಯಕ್ಕೆ ಪೂರಕವಾಗಿ, ಅದರಲ್ಲಿ ಬರುವ ತಾಂತ್ರಿಕ ಮತ್ತು ವೈದ್ಯಕೀಯ ಇಂಗ್ಲಿಷ್ ಶಬ್ದಗಳು, ಸೇವಾಸಂಸ್ಥೆಗಳ ವೆಬ್‌ಸೈಟ್ ವಿಳಾಸಗಳು ಮತ್ತು ಫೋನ್ ನಂಬರುಗಳು, ಕಿವುಡಿನ ಸವಾಲನ್ನು ಜಯಿಸಿ ವಿಖ್ಯಾತರಾದವರ ಮತ್ತು ಕಿವುಡು ಮಕ್ಕಳ ಶಿಕ್ಷಣ ಹಾಗೂ ಚಿಕಿತ್ಸೆಯಲ್ಲಿ ಪಥಪ್ರವರ್ತಕ ವ್ಯಕ್ತಿಗಳ ಹೆಸರುಗಳು– ಇವುಗಳೆಲ್ಲವನ್ನೂ ಅನುಬಂಧಗಳನ್ನಾಗಿ ನೀಡಿದ್ದಲ್ಲಿ, ಪುಸ್ತಕವು ಮಾರ್ಗದರ್ಶಕವಾಗಿ ಮತ್ತು ಸ್ಫೂರ್ತಿದಾಯಕವಾಗಿ ಇನ್ನೂ ಹೆಚ್ಚು ಮೌಲಿಕವಾಗಿರುತ್ತಿತ್ತು.

ಖಾಸಗಿ ಜೀವನದ ಅನುಭವವನ್ನು ಜನೋಪಕಾರಕ್ಕಾಗಿ ತೆರೆದಿಟ್ಟು, ಒಂದು ಹೊಸ ರೀತಿಯ ಆತ್ಮಕಥೆಯಾಗಿ ಎದ್ದು ಕಾಣುವ ಈ ಪುಸ್ತಕವು, ಕಿವುಡು ಮಕ್ಕಳ ಪೋಷಕರಷ್ಟೇ ಅಲ್ಲದೆ, ಮಕ್ಕಳ ಬೆಳವಣಿಗೆಯಲ್ಲಿ ಆಸಕ್ತರಾಗಿರುವವರು ಮತ್ತು ಮೊತ್ತದಲ್ಲಿ, ಕನ್ನಡಿಗರೆಲ್ಲರೂ ತಪ್ಪದೇ ಓದಬೇಕಾದ, ಮತ್ತು ಅನ್ಯಭಾಷೆಗಳಿಗೂ ಅನುವಾದವಾಗಲೇಬೇಕಾದ ಬಹುಮೂಲ್ಯ ವಸ್ತುವನ್ನೊಳಗೊಂಡಿದೆ.

'ಮೂರನೇ ಕಿವಿ' ಪುಸ್ತಕವು ಫೆಬ್ರವರಿ ೨೦೧೩ರಲ್ಲಿ ಮೈಸೂರಿನಲ್ಲಿ ಬಿಡುಗಡೆಯಾದ ಸಮಾರಂಭದಲ್ಲಿ ನಿರಂಜನನು, 'ಅಲಖ್ ನಿರಂಜನ್!' ಎಂಬಂತೆ ನಿರ್ಭಯವಾಗಿ ನೀಡಿದ ಪುಟ್ಟ ಭಾಷಣದಿಂದ ಪುಸ್ತಕವಸ್ತುವಿನ ಪರಿಚಯವನ್ನು ಅನನ್ಯ ರೀತಿಯಲ್ಲಿ ಪಡೆದು ಪುಳಕಿತರಾದ ನೂರಾರು ಶ್ರೋತೃಗಳು, ಪುಸ್ತಕವು ಕಥಿಸಿರುವ ಮಾನವ ಸಾಧ್ಯತೆ–ಸಾಧನೆಗಳಿಗೆ ಜೀವಂತ ಸಾಕ್ಷಿಗಳಾಗಿದ್ದಾರೆ. ಇದೇ ಪುಳಕಿತ ಭಾವನೆಯು ಪುಸ್ತಕದ ಎಲ್ಲ ಓದುಗರನ್ನೂ ತುಂಬುವುದು ಎಂಬುವುದರಲ್ಲಿ ಎರಡು ಮಾತಿಲ್ಲ.

**ಎಸ್. ಜಿ. ಸೀತಾರಾಮ್, ಮೈಸೂರು.**



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

**ಛಾಯಾಚಿತ್ರ ೬೭:** ಸ್ವಾಮಿ ಅಖಂಡಾನಂದರ ಪ್ರಕಾರ, ಸ್ವಾಮಿ ವಿವೇಕಾನಂದರು ಕೊಲ್ಕತಾದ ಗೋಪಾಲ್ ಲಾಲ್ ಸೀಲ್ ಎಂಬುವವರ ಉದ್ಯಾನಗೃಹದಲ್ಲಿ ವಾಸ್ತವ್ಯವನ್ನು ಹೂಡಿದಾಗ ತೆಗೆದ ಚಿತ್ರ ಇದು. ಕೊಲ್ಕತಾದ 'ಆರ್ಟ್ಸ್ ವರ್ಕರ್ಸ್ ಲೀಗ್' ಎಂಬ ಕಂಪನಿಯ ಕಡೆಯವರು ಇದರ ಛಾಯಾಗ್ರಾಹಕರು. ಈ ಗುಂಪುಚಿತ್ರದಲ್ಲಿ ಇರುವವರ ಪರಿಚಯ ಹೀಗಿದೆ:

(ನಿಂತವರು – ಎಡದಿಂದ) ಶಾಂತಿರಾಮ ಬಾಬು, ಮಿ. ಟರ್ನ್‌ಬುಲ್, ಸ್ವಾಮಿ ಪ್ರಕಾಶಾನಂದ, ಅಪರಿಚಿತರು, ಸ್ವಾಮಿ ವಿವೇಕಾನಂದ, ಕ್ಯಾಪ್ಟನ್ ಸೇವಿಯರ್, ಸ್ವಾಮಿ ಶಿವಾನಂದ.


ಚಿತ್ರ: ೬೭

(ಕುಳಿತವರು – ಎಡದಿಂದ) ಅಳಸಿಂಗ ಪೆರುಮಾಳ್, ಸ್ವಾಮಿ ರಾಮಕೃಷ್ಣಾನಂದ, ಸ್ವಾಮಿ ಪ್ರೇಮಾನಂದ, ಮಿಸೆಸ್. ಸೇವಿಯರ್, ಸ್ವಾಮಿ ಅದ್ಭುತಾನಂದ, ಸ್ವಾಮಿ ತುರೀಯಾನಂದ, ಜಿ.ಜಿ.ನರಸಿಂಹಾಚಾರ್.

(ನೆಲದ ಮೇಲೆ ಕುಳಿತವರು – ಎಡದಿಂದ) ಅಪರಿಚಿತರು, ಕೊಲೊಂಬೋವಿನ ಮಿಸ್ಟರ್ ಹ್ಯಾರಿಸನ್.


ಚಿತ್ರ: ೬೮

**ಛಾಯಾಚಿತ್ರ ೬೮:** ಸ್ವಾಮಿ ವಿವೇಕಾನಂದರು ೧೮೯೭, ಸೆಪ್ಟೆಂಬರ್ ೧೦ ರಿಂದ ಸುಮಾರು ಒಂದು ತಿಂಗಳ ಕಾಲ ಕಾಶ್ಮೀರದ ಪ್ರವಾಸವನ್ನು ಮಾಡಿದರು. ಆಗ ಸುತ್ತಮುತ್ತಲ ಐತಿಹಾಸಿಕ ಕ್ಷೇತ್ರಗಳನ್ನು ಸಂದರ್ಶಿಸಿದರು. ಅವರ ದರ್ಶನಕ್ಕೆ ಸಾಧುಗಳು, ಪಂಡಿತರು, ವಿದ್ಯಾರ್ಥಿಗಳು, ಉನ್ನತ ಅಧಿಕಾರಿಗಳು ಹಾಗೂ ಇತರ ನೂರಾರು ಜನರು ಬರುತ್ತಿದ್ದರು. ಒಂದು ದಿನ ಸ್ವಾಮೀಜಿ, ಪಂಡಿತರ ವಿಶಾಲವಾದ